ಆ) 2003–04ನೇ ಸಾಲಿನಲ್ಲಿ 100 ಎಕರೆ ಭೂಮಿಗೆ ನೀರು ಒದಗಿಸಲಾಗಿದೆ ಹಾಗೂ 2004–05ನೇ ಸಾಲಿನಲ್ಲಿ ಯೋಜನೆಯ ಪಂಪು ದುರಸ್ತಿಗೆ ಬಂದಿದ್ದರಿಂದ 11 ಎಕರೆ ಜಮೀನಿಗೆ ಮಾತ್ರ ನೀರು ಒದಗಿಸಲು ಸಾಧ್ಯವಾಗಿದೆ ಪ್ರಸಕ್ತ ಸಾಲಿನಲ್ಲಿ ನೀರು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ದುರಸ್ತಿಯಲ್ಲಿರುವ 10 ಏತ ನೀರಾವರಿ ಯೋಜನೆಗಳ ಪೈಕಿ 5 ಏತ ನೀರಾವರಿ ಯೋಜನೆಗಳ ಮೆಕ್ಯಾನಿಕಲ್ ಹಾಗೂ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಯೋಜನೆಗಳು ಕಾರ್ಯರಂಭ ಮಾಡಲು ಸಿದ್ದವಾಗಿರುತ್ತವೆ. ಈ ಸಾಲಿನ ಮುಂಗಾರಿನಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ಉಳಿದ ಏತ ನೀರಾವರಿ ಯೋಜನೆಗಳ ಪೈಕಿ ಎರಡು ಯೋಜನೆಗಳು ದುರಸ್ತಿ ಮಾಡದ ಸ್ಥಿತಿಯಲ್ಲಿದ್ದು ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ಉಳಿದ 3 ಯೋಜನೆಗಳಿಗೆ ಸಮಗ್ರವಾಗಿ ನವೀಕರಣ ಮಾಡಬೇಕಾಗಿದ್ದು ಅನುದಾನದ ಲಭ್ಯತೆಯ ಮೇಲೆ ಕೈಗೊಳ್ಳಲಾಗುವುದು.

ಈ) ಈ ಯೋಜನೆಯಲ್ಲಿ ಯಾವುದೇ ಹೊಸದಾಗಿ ಪಂಪ್ ಸೆಟ್‌ಗಳನ್ನು ಖರೀದಿಸಿರುವುದಿಲ್ಲ.

1061 (1610) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ್): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫಜಲಪುರ ತಾಲ್ಲೂಕಿನ ಬೋರಿ ನದಿಯ ಮೇಲೆ ದಿಗ್ಸಂಘ (ಕೆ)ಗ್ರಾಮದ ಹತ್ತಿರ ಬಂದರು ನಿರ್ಮಿಸಲಾಗಿದ್ದು ಯಾವಾಗ;

ಆ) ಈ ಬಂದರಿಗೆ ನೀರು ನಿಲ್ಲಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದೆಯೇ;

ಇ) ಈ ಬಂದರು ಕೆಲಸಗಳಿಗೆ ಗೇಟುಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಬಂದರಿಗೆ ಗೇಟುಗಳನ್ನು ಅಳವಡಿಸಿ, ನೀರನ್ನು ನಿಲ್ಲಿಸಿ ರೈತರಿಗೆ ನೀರು ಕೊಡುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) 2001ರಲ್ಲಿ.

ಆ) ಹೌದು.

ಇ) ಗೇಟುಗಳಿವೆ ಆದರೆ, ಅವುಗಳು ದುರಸ್ತಿಯಲ್ಲಿರುತ್ತವೆ.

ಈ) ದುರಸ್ತಿಯಲ್ಲಿರುವ ಗೇಟುಗಳನ್ನು ಸರಿಪಡಿಸಿ ರೈತರಿಗೆ ನೀರು ಕೊಡಲು ಕ್ರಮ ಕೈಗೊಳ್ಳಲಾಗುವುದು.

1062 (1611) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ್): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫ್‌ಜಲಪುರ ತಾಲ್ಲೂಕಿನ ಬೋರಿ ನದಿ ದಂಡೆಯ ಮೇಲೆ ನಂದರಗಾ ಗ್ರಾಮದ ಹತ್ತಿರ ಬಂದರು ನಿರ್ಮಾಣ ಆಗಿದ್ದು ಅದರ ಕೆಳಗಡೆ ತಡೆಗೋಡೆ ಇಲ್ಲದೆ ರೈತರ ಫಸಲು ಕೊಚ್ಚಿಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದನ್ನು ತಡೆಯಲು ತಡೆಗೋಡೆ ಕಟ್ಟುವ ಮುಖಾಂತರ ಬಂದರು ಕೆಳಗಿರುವ ರೈತರ ಸಹಾಯಕ್ಕೆ ಸರ್ಕಾರ ಬರುವುದೇ;

ಇ) ಹಾಗಿದ್ದಲ್ಲಿ, ಈ ತಡೆಗೋಡೆಯನ್ನು ಯಾವಾಗ ನಿರ್ಮಿಸಲಾಗುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಸದರಿ ಬಾಂದಾರದ ಕೆಳಗೆ ವಿಂಗ್‌ವಾಲ್ ನಂತರ ಎರಡೂ ಕಡೆ 20ಮೀ. ಉದ್ದದ ಕಲ್ಲಿನ ರಿವಿಟ್‌ಮೆಂಟ್ ಕಟ್ಟಲಾಗಿದೆ. ಕಳೆದ ಸಾಲಿನ ಜುಲೈ ತಿಂಗಳಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಕಲ್ಲಿನ ರಿವಿಟ್‌ಮೆಂಟ್‌ಗೆ ಹಾನಿಯಾಗಿದೆ. ಆದರೆ ರೈತರ ಜಮೀನಿಗಾಗಲಿ ಬೆಳೆಗಾಗಲಿ ಯಾವುದೇ ಹಾನಿಯಾಗಿಲ್ಲ.

ಆ) ಮತ್ತು ಇ) ಹಾನಿಗೊಳಗಾಗಿರುವ ಕಲ್ಲಿನ ರಿವಿಟ್‌ಮೆಂಟನ್ನು ಅನುದಾನದ ಲಭ್ಯತೆಯ ಮೇಲೆ ದುರಸ್ತಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

1063 (1612) ಶ್ರೀ ಪಾಟೀಲ್ ಎಂ.ವೈ. (ಅಫಜಲ್‌ಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಸೇಂದಿ ಮತ್ತು ಸಾರಾಯಿ ಗುತ್ತಿಗೆದಾರರಿಂದ ಬಹಳ ದೊಡ್ಡ ಮೊತ್ತವು ವಸೂಲಾಗದೆ ಉಳಿದಿರುವುದು ನಿಜವೇ;

ಆ) ಯಾವ್ಯಾವ ಗುತ್ತಿಗೆದಾರರಿಂದ ಎಷ್ಟೆಷ್ಟು ಹಣ ಬಾಕಿ ಉಳಿದಿದೆ (ಸಂಕ್ಷಿಪ್ತ ವಿವರವನ್ನು ನೀಡುವುದು) :

ಇ) ಬಾಕಿ ಉಳಿಸಿಕೊಂಡ ಗುತ್ತಿಗೆದಾರರು ಬೇರೆಯವರ ಹೆಸರಿನಲ್ಲಿ ಪ್ರತಿ ವರ್ಷ ಗುತ್ತಿಗೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇಂತಹ ಗುತ್ತಿಗೆದಾರರಿಂದ ಯಾವಾಗ ಬಾಕಿ ಹಣವನ್ನು ವಸೂಲು ಮಾಡಲಾಗುವುದು;

ಉ) ಬಾಕಿ ಕಟ್ಟದಿದ್ದಲ್ಲಿ ಅವರ ಆಸ್ತಿ-ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲ.

ಈ) ಇಂತಹ ಗುತ್ತಿಗೆದಾರರು ಹೊಂದಿರುವ ಚರ-ಸ್ಥಿರ ಆಸ್ತಿಗಳನ್ನು ಭೂಕಂದಾಯ ನಿಯಮಗಳನ್ವಯ ವಿಲೇ ಮಾಡಿ ಹಣವನ್ನು ವಸೂಲಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ.

ಉ) ಸಂಬಂಧಪಟ್ಟ ಜಿಲ್ಲೆಯ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್‌ರವರು ಬಾಕಿದಾರರು ಹೊಂದಿರುವ ಚರಸ್ಥಿರಾಸ್ತಿಯನ್ನು ಪತ್ತೆ ಹಚ್ಚಿ ಅವುಗಳನ್ನು ಭೂಕಂದಾಯ ಕಾಯ್ದೆಯಡಿಯಲ್ಲಿ ವಸೂಲಾತಿಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ 12.95 ಕೋಟಿ ರೂ.ಗಳಿಗೆ ದೃಢತಿ ಪ್ರಮಾಣ ಪತ್ರ ನೀಡಿದ್ದು, ಜಿಲ್ಲಾಧಿಕಾರಿಗಳು ಭೂಕಂದಾಯ ಬಾಕಿಯೆಂದು ಪರಿಗಣಿಸಿ ವಸೂಲಾತಿಗೆ ಕ್ರಮ ಕೈಗೊಂಡಿರುತ್ತಾರೆ. ಸರ್ಕಾರವು ಮತ್ತೊಮ್ಮೆ ಕರ ಸಮಾಧಾನ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿದ್ದು, ಸದರಿ ಯೋಜನೆಯಡಿಯಲ್ಲಿಯೂ ಸಹ ಬಾಕಿಯನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.